# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. 233 / 2021</u>

ಸಿಡಬ್ಲ್ಯೂ- **14**
ಪಿಡಬ್ಲ್ಯೂ- **15**

<u>ದಿನಾಂಕಃ **19.02.2026.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರುಃ | - | ವೆಂಕಟಪ್ಪ |
| ತಂದೆಯ/ಗಂಡನ ಹೆಸರುಃ | - | ಗಂಗಯ್ಯ |
| ವಯಸ್ಸುಃ | - | **54** ವರ್ಷ |
| ಉದ್ಯೋಗಃ | - | ಹಿರಿಯ ಮೋಟಾರು ವಾಹನ ನೀರಿಕ್ಷಕರು, ಕಲಬುರಗಿ. |
| ವಾಸಸ್ಥಳಃ | - | ಕಲಬುರಗಿ. |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

2023 ರಿಂದ ಇಲ್ಲಿಯ ವರೇಗೆ ನಾನು ಹಿರಿಯ ಮೋಟಾರು ವಾಹನ ನೀರಿಕ್ಷಕನ್ನಾಗಿ ಪ್ರಾದೇಶಿಕ ಸಾರಿಗೆ ಕಚೇರಿ ಕಲಬುರಗಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 12.03.2021 ರಂದು ಯಾದಗಿರಿಯ ವೃತ್ತ ನೀರಿಕ್ಷಕರ ಕೋರಿಕೆಯ ಪತ್ರದ ಮೇರೆಗೆ ಅದೇ ದಿನ ಸಂಜೆ 4 ಗಂಟೆಗೆ ಯಾದಗಿರಿಯ ಸಂಚಾರ ಪೊಲೀಸ್ ಠಾಣೆಯ ಆವರಣದಲ್ಲಿ ನಿಲ್ಲಿಸಿದ ಕಾರ ಸಂಖ್ಯೆಃ ಕೆಎ-33-ಎಮ್-3024 ನೇದ್ದನ್ನು ನಾನು ಪರಿಶೀಲಿಸಿದ್ದೆ ಸದರಿ ವಾಹನದ ಎಡಭಾಗದ ಹಿಂದಿನ ಇಂಡಿಕೇಟ್‌ರ ಜಖಂಗೊಂಡಿತ್ತು. ಅದರ ಅಡತಡೆಗಳನ್ನು ಪರಿಶೀಲಿಸಿದ್ದಾಗ ಅವುಗಳು ಸೂಸ್ತಿಯಲ್ಲಿ ಇದ್ದವು. ನನ್ನ ಅಭಿಪ್ರಾಯದ ಪ್ರಕಾರ ಅಪಘಾತವು ಕಾರಿನ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಇದರ ಬಗ್ಗೆ ನಾನು ದಾಖಲೆಯನ್ನು ನೀಡಿದ್ದೆ. ಸಾಕ್ಷಿಯು ತಾನು ನೀಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 13 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 13(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಹೆಚ್.ಎಂ.ಪಿ.ರವರಿಂದಃ</u>

ಕಾರಿನ ಎಡಹಿಂಬದಿಯ ಇಂಡಿಕೇಟರ್ ಸೀಳಿತೋ ಅಥವಾ ಅದಕ್ಕೆ ಹೊಲ್ ಬಿದ್ದಿತ್ತಾ ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ಕೋರಿಕೆಯ ಪತ್ರದಲ್ಲಿ ಗುನ್ನಾ ಸಂಖ್ಯೆಃ ಮತ್ತು ಅಪಘಾತದ ದಿನಾಂಕ ನಮೂದಿಸುತ್ತಾರೆ ಎಂದರೆ ಸರಿ. ಯಾವ ದಿನಾಂಕ ದಂದು ಅಪಘಾತ

ಆಯಿತು ಎಂದರೆ ಸಾಕ್ಷಿಯು ನಿಪಿ 13 ರಲ್ಲಿ ನಾನು ಬರೆದಿರುವುದಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 12.03.2021 ರಂದು ಯಾದಗಿರಿಯ ವೃತ್ತ ನೀರಿಕ್ಷಕರ ಕೋರಿಕೆಯ ಪತ್ರದ ಮೇರೆಗೆ ಅದೇ ದಿನ ಸಂಜೆ 4 ಗಂಟೆಗೆ ಯಾದಗಿರಿಯ ಸಂಚಾರ ಪೊಲೀಸ್ ಠಾಣೆಯ ಆವರಣದಲ್ಲಿ ನಿಲ್ಲಿಸಿದ ಕಾರ ಸಂಖ್ಯೆ: ಕೆಎ-33-ಎಮ್-3024 ನೇದ್ದನ್ನು ನಾನು ಪರಿಶೀಲಿಸಿದ್ದೆ ಸದರಿ ವಾಹನದ ಎಡಭಾಗದ ಹಿಂದಿನ ಇಂಡಿಕೇಟ್‌ರ ಜಖಂಗೊಂಡಿತ್ತು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ವಾಹನವನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ಸುಳ್ಳು ನಿಪಿ 13 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.